# ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)

ನಂ 17/1, ಮೊದಲನೇ ಮಹಡಿ, ಬಿ.ಎಂ.ಟಿ.ಸಿ. ಬಸ್ ಸ್ಟಾಪ್ ಹತ್ತಿರ,
ಹೊಸಗುಡ್ಡದ ಹಳ್ಳಿ, ಮೈಸೂರು ರಸ್ತೆ, ಬೆಂಗಳೂರು – 560 026


ಆತ್ಮೀಯ ಕಾರ್ಮಿಕರೇ,

ಕರ್ನಾಟಕ ಸರ್ಕಾರವು, ಕನಿಷ್ಠವೇತನ ಪರಿಷ್ಕರಣಾ ಸಲಹಾ ಮಂಡಳಿಗೆ GATWU ವನ್ನು ನಾಮ ನಿರ್ದೇಶನ ಮಾಡಿ 2012ರ ಡಿಸೆಂಬರ್‌ನಲ್ಲಿ ಆದೇಶ ಹೊರಡಿಸಿದೆ. ಈ ಮೂಲಕ ಸರ್ಕಾರದ ಮಟ್ಟದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರನ್ನು ಸಮರ್ಥವಾಗಿ ಪ್ರತಿನಿಧಿಸಲು GATWUವಿಗೆ ಅವಕಾಶ ಸಿಕ್ಕಂತಾಗಿದೆ ಮತ್ತು 2013ರಲ್ಲಿ ಗಾರ್ಮೆಂಟ್ಸ್ ಕಾರ್ಮಿಕರ ವೇತನ ಪರಿಷ್ಕರಣೆಯು GATWUವಿನ ಪ್ರಥಮ ಆದ್ಯತೆಯಾಗಿದೆ.

GATWUವು, ಕಳೆದ 7 ವರ್ಷಗಳಿಂದ ಗಾರ್ಮೆಂಟ್ಸ್ ಕಾರ್ಮಿಕರ ಹಕ್ಕುರಕ್ಷಣೆ ಹಾಗೂ ಅವರ ಕೆಲಸದ ಪರಿಸ್ಥಿತಿಯನ್ನು ಉತ್ತಮ ಪಡಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಗಾರ್ಮೆಂಟ್ಸ್ ಕಾರ್ಮಿಕರಿಗೆ ಕನಿಷ್ಠವೇತನ ಹೆಚ್ಚಾಗಬೇಕೆಂದು 2007ರಿಂದಲೂ ಸತತವಾಗಿ ಹೋರಾಡುತ್ತಿದೆ. ಗಾರ್ಮೆಂಟ್ಸ್ ಕಾರ್ಮಿಕರಿಗೆ ತಿಂಗಳಿಗೆ ರೂ. 12,000 ಬದುಕುವ ವೇತನಕ್ಕಾಗಿ ಮತ್ತು ಕಾರ್ಖಾನೆಗಳಲ್ಲಿ ಶೋಷಣೆ ಮುಕ್ತ ವಾತಾವರಣಕ್ಕಾಗಿ ಸರ್ಕಾರ, ಮಾಲೀಕರು, ಬ್ರಾಂಡ್‌ಗಳನ್ನು, ಅಂತರರಾಷ್ಟ್ರೀಯ ಸಂಘಟನೆಗಳ ಜೊತೆಗೂಡಿ ಆಗ್ರಹಿಸುತ್ತಿದೆ.

ಇದಲ್ಲದೆ,

- **ಕಾರ್ಮಿಕರಿಗೆ ವರ್ಷಕ್ಕೆ ಎರಡು ಬಾರಿ ಡಿ.ಎ. ಹೆಚ್ಚಿಸಬೇಕೆಂದು ಮತ್ತು**
- **ಡಿ.ಎ. ಜೊತೆಗೆ, ಒಂದೇ ಕಾರ್ಖಾನೆಯಲ್ಲಿ ಕೆಲಸ ಮುಂದುವರೆಸುವ ಕಾರ್ಮಿಕರಿಗೆ ವಾರ್ಷಿಕ ಇನ್‌ಕ್ರಿಮೆಂಟ್ ಅನ್ನೂ** ನೀಡಬೇಕೆಂದು GATWU ಸರ್ಕಾರಕ್ಕೆ ಒತ್ತಾಯಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಗಾರ್ಮೆಂಟ್ಸ್ ಕಾರ್ಮಿಕರ ಆರ್ಥಿಕ, ಸಾಮಾಜಿಕ ಹಾಗೂ ಕೆಲಸದ ವಾತಾವರಣದ ಬಗ್ಗೆ ತಿಳಿದುಕೊಳ್ಳಲು GATWUವು ಮಾದರಿ ಸಮೀಕ್ಷೆಯೊಂದನ್ನು ನಡೆಸುತ್ತಿದ್ದು, ಈ ಸಮೀಕ್ಷೆಗೆ ಉತ್ತರಿಸುವ ಮೂಲಕ ಯೂನಿಯನ್‌ನ ಪ್ರಯತ್ನಕ್ಕೆ ತಮ್ಮ ಕೈ ಜೋಡಿಸಬೇಕೆಂದು ಕೇಳಿಕೊಳ್ಳುತ್ತಿದೆ.

**ಬನ್ನಿ... ಬೆಂಬಲಿಸಿ, GATWUವಿನ ಸದಸ್ಯರಾಗುವ ಮೂಲಕ ಯೂನಿಯನ್ ಬಲವನ್ನು ಹೆಚ್ಚಿಸಿ.**


ಗಾರ್ಮೆಂಟ್ಸ್ ಕಾರ್ಮಿಕರ ಕೆಲಸಕ್ಕೆ ಸಂಬಂಧಪಟ್ಟ, P.F & E.S.I.ಗೆ ಸಂಬಂಧಪಟ್ಟ ಮತ್ತು ಇತರೆ ಯಾವುದೇ ಸಮಸ್ಯೆಗೆ ಸಂಪರ್ಕಿಸಿ: ಮೊಬೈಲ್ : 9844714476, 9743675445, ಮತ್ತು 9686229761, ದೂರವಾಣಿ : 080–26745242